# 5 ತೆಂಗಿನಕಾಯಿ



■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

ನರೇಂದ್ರನೆಂಬ ರಾಜನಿಗೆ ರಾಘವ ಮತ್ತು ಕೇಶವ ಎಂಬ ಮಕ್ಕಳಿದ್ದರು. ಹಿರಿಯನಾದ ರಾಘವ ಶೂರ ಹಾಗೂ ಸಾಹಸಿಯಾಗಿದ್ದ. ಆದರೆ, ಅಹಂಕಾರಿ ಮತ್ತು ಸ್ವಾರ್ಥಿಯಾಗಿದ್ದ. ಕಿರಿಯನಾದ ಕೇಶವ ಶೌರ್ಯ ಸಾಹಸಗಳಲ್ಲಿ ಅಣ್ಣನಿಗೆ ಸರಿಸಮಾನನಾಗಿರಲಿಲ್ಲ. ಅವನ ಸ್ವಭಾವ ತುಂಬ ಸೌಮ್ಯ. ಜೊತೆಗೆ ವಿನಯವಂತ ಹಾಗೂ ಕರುಣಾಶಾಲಿ ಕೂಡ. ತಂದೆಗೆ ಕೇಶವನೇ ಅಚ್ಚು ಮೆಚ್ಚು. ಇದರಿಂದ ರಾಘವನಿಗೆ ತಮ್ಮನನ್ನು ಕಂಡರೆ ಅಸೂಯೆ. ಅಲ್ಲದೆ ಮುಂದೆ ತಾನು ರಾಜನಾಗುವ ಅವಕಾಶ ತಪ್ಪಿ ಹೋಗಬಹುದೇನೋ ಎಂಬ ಆತಂಕ.

ಒಮ್ಮೆ ರಾಘವ ಬೇಟೆಗೆಂದು ಕಾಡಿಗೆ ಹೊರಟ. ತಂದೆಯ ಆದೇಶದಂತೆ ಇಷ್ಟವಿಲ್ಲದಿದ್ದರೂ ಕೇಶವನನ್ನೂ ಜೊತೆಯಲ್ಲಿ ಕರೆದುಕೊಂಡು ಹೊರಟ. ರಾಘವ ಕ್ರೂರ ಮೃಗಗಳ ಬೆನ್ನಟ್ಟಿ ಹೊರಟರೆ, ಸೈನಿಕರೆಲ್ಲ ರಾಘವನ ಹಿಂದೆಯೇ ಹೋಗಿಬಿಟ್ಟರು. ಕೇಶವ ಅವನ ಸರಿಸಮ ಓಡಲಾಗದೆ ಹಿಂದೆ ಬಿದ್ದ. ಕೇಶವ ಒಂಟಿಯಾದ. ಬಹುದೂರ ಹೊರಟು ಹೋಗಿದ್ದ ಅಣ್ಣನನ್ನು ಸೇರುವ ದಾರಿಯಾಗಲಿ, ಹಿಂತಿರುಗಿ ತನ್ನ ಅರಮನೆಗೆ ಹೋಗುವ ದಾರಿಯಾಗಲಿ ಅವನಿಗೆ ಗೊತ್ತಾಗದೆ ಕಾಡಿನಲ್ಲಿ ಅಲೆದಾಡತೊಡಗಿದ. ಸಂಜೆಯಾಗುತ್ತಾ ಬಂದರೂ ಅವನಿಗೆ ಸರಿ ದಾರಿ ಕಾಣದೆ, ಹಸಿವು, ಬಾಯಾರಿಕೆ, ಆಯಾಸಗಳಿಂದ ಬಳಲಿ, ಮರವೊಂದರ ಕೆಳಗೆ ಕುಳಿತು ತನ್ನ ದುರವಸ್ಥೆಯ ಬಗ್ಗೆ ಗೋಳಾಡತೊಡಗಿದ.

ಆ ಮರದ ಬಳಿಯೇ ಮಲಗಿದ್ದ, ತುಂಬ ವಯಸ್ಸಾಗಿದ್ದ ಋಷಿ ಒಬ್ಬರು ಆ ಯುವಕನ ಅವಸ್ಥೆ, ಗೋಳಾಟ ನೋಡಿ ಅವನನ್ನು ಮಾತಾಡಿಸಿದರು. ಅವನ ಪರಿಸ್ಥಿತಿಯ ವಿವರಗಳನ್ನೆಲ್ಲ ತಿಳಿದುಕೊಂಡು 'ಮಗು, ನನಗೆ ನಿನ್ನ ರಾಜ್ಯದ ದಾರಿ ತಿಳಿದಿಲ್ಲ. ಆದರೆ ನಾನು ನಿನಗೆ ಒಂದು ಸಹಾಯ ಮಾಡಬಲ್ಲೆ. ನನ್ನ ಬಳಿ ವಿಶೇಷ ಶಕ್ತಿಯುಳ್ಳ ಐದು ತೆಂಗಿನಕಾಯಿಗಳಿವೆ. ಈ ತೆಂಗಿನಕಾಯಿಗಳನ್ನು ಒಂದೊಂದಾಗಿ ಒಡೆದು ನೀನು ಏನು ಕೇಳಿಕೊಂಡರೂ ಅದು ನೆರವೇರುತ್ತದೆ. ನಾನು ಇನ್ನು ಹೆಚ್ಚು ಹೊತ್ತು ಬದುಕಿರುವುದಿಲ್ಲ. ನಾನು ಸಾಯುವುದರೊಳಗೆ ನಿನಗೆ ಈ ತೆಂಗಿನಕಾಯಿಗಳನ್ನು ಕೊಡುತ್ತೇನೆ ಇದರಿಂದ ನನಗೆ ನೆಮ್ಮದಿ ಸಿಗುತ್ತದೆ' ಎಂದು ಹೇಳಿ ಆ ತೆಂಗಿನಕಾಯಿಗಳನ್ನು ಕೇಶವನಿಗೆ ಕೊಟ್ಟು ಸ್ವಲ್ಪ ಹೊತ್ತಿನಲ್ಲಿಯೇ ಪ್ರಾಣ ಬಿಟ್ಟರು.

ಕೇಶವ ಅವರ ಅಂತ್ಯಕ್ರಿಯೆ ನೆರವೇರಿಸಿ ಅದೇ ಮರದ ಕೆಳಗೆ ಕುಳಿತ. ಹಸಿವು, ಬಾಯಾರಿಕೆ, ಆಯಾಸ ಅವನನ್ನು ಬಾಧಿಸುತ್ತಿತ್ತು. ಕೂಡಲೇ ಒಂದು ತೆಂಗಿನಕಾಯಿಯನ್ನು ಒಡೆದು ತನ್ನ ಹಸಿವು ಬಾಯಾರಿಕೆ ನೀಗಿಸಲು ಆಹಾರ, ಪಾನೀಯಗಳು ಹಾಗೂ ಆಯಾಸ ಪರಿಹರಿಸಿಕೊಳ್ಳಲು ಸುಪ್ಪತ್ತಿಗೆ